## 13

# ಕ್ರಿಸ್ತನ ದಾಸರು

*"ಈಗಲಾದರೋ ನೀವು ಪಾಪದಿಂದ ಬಿಡುಗಡೆಯನ್ನು ಹೊಂದಿ ದೇವರಿಗೆ ದಾಸರಾದದರಿಂದ ಪರಿಶುದ್ಧರಾಗುವದೇ ನಿಮಗೆ ಫಲ; ಕಡೆಗೆ ದೊರೆಯುವಂಥದು ನಿತ್ಯಜೀವ" (ರೋಮಾಪುರ 6:22).*

ಕೆಲವು ವರ್ಷಗಳ ಹಿಂದೆ ಕ್ಯಾಲಿಫೋರ್ನಿಯದ ಮೊಡೆಸ್ಟೊ ಎಂಬಲ್ಲಿ ಸುವಾರ್ತಾ ಪ್ರಸಂಗಗಳನ್ನು ಪ್ರಸಂಗಿಸುತ್ತಿದ್ದೆನು. ನನ್ನ ಕುಟುಂಬವು ನನ್ನೊಂದಿಗಿತ್ತು ಮತ್ತು ಕೂಟದ ಎರಡು ದಿನಗಳಲ್ಲಿ ಅಲ್ಲಿಯ ಒಂದು ಕ್ರೈಸ್ತ ಕುಟುಂಬವು ತಮ್ಮ ಮನೆಯಲ್ಲಿ ನಮ್ಮನ್ನು ಇಟ್ಟುಕೊಂಡಿದ್ದರು. ಸುಸನ್ನ ಮತ್ತು ನನ್ನನ್ನು ಅವರು ಬಹಳ ಸ್ಥಳವುಳ್ಳ ಬೆಡ್‌ರೂಮಿನಲ್ಲಿ ನಮ್ಮನ್ನಿಟ್ಟಿದ್ದರು. ಅವರೊಂದಿಗಿನ ನಮ್ಮ ಎರಡನೆಯ ದಿನವು ಬಹಳ ಕಾರ್ಯದಿಂದ ತುಂಬಿತ್ತು, ಮತ್ತು ಆ ರಾತ್ರಿ ಹತ್ತು ಗಂಟೆಗೆ ನಮ್ಮ ಆರಾಧನೆ ಮುಗಿಯುವ ವರೆಗೆ ನಮಗೆ ಬಿಡುವಿರಲಿಲ್ಲ. ಒಂದು ಗಂಟೆ ನಡೆದುಕೊಂಡು ಬಂದನಂತರ ಮನೆಗೆ ಹಿಂದಿರುಗುವಾಗ ತಡವಾಗಿತ್ತು. ಮುಂದಿನ ಕೋಣೆ ಬಿಟ್ಟು ಉಳಿದ ಎಲ್ಲಾ ಕೋಣೆಗಳ ದೀಪಗಳು ಆರಿಸಲ್ಪಟ್ಟಿದ್ದವು, ನನಗಾಗಿ ಮನೆಯವರು ಬಾಗಿಲಿಗೆ ಬೀಗ ಹಾಕಿರಲಿಲ್ಲ. ಆದುದರಿಂದ ಮುಂದಿನ ಬಾಗಿಲಿನಿಂದ ಪ್ರವೇಶಿಸಿ, ಮನೆಯೊಳಗೆ ಹೋಗಿ, ಅವರು ನಮಗೆ ಕೊಟ್ಟಿದ್ದ ಬೆಡ್ಡ್ ರೂಮಿಗೆ ಹೋದೆನು. ನಾನು ಹೋಗಿದ್ದ ದಾರಿಯಲ್ಲಿ, ಮುಂದಿನ ಕೋಣೆಯು ಮಲಗುವ ಕೋಣೆಯನ್ನಾಗಿ ಮಾಡಿದ್ದನ್ನು ಗಮನಿಸಿದೆನು. ಸುಪ್ಪತ್ತಿಗೆಯು ಹಾಸಿಗೆಯಾಗಿ ಮಾಡಲ್ಪಟ್ಟಿತ್ತು, ಮತ್ತು ನಮ್ಮನ್ನು ಇರಿಸಿಕೊಂಡಿದ್ದ ದಂಪತಿಗಳು ಸುಪ್ಪತ್ತಿಗೆಯ ಮೇಲೆ ಮಲಗಿಕೊಂಡಿದ್ದರು. ಈ ಇಬ್ಬರು ಕ್ರೈಸ್ತರು ನಿಜವಾದ ಸೇವಕರಾಗಿದ್ದರು ಎಂಬ ಅರ್ಥವು ನನ್ನನ್ನು ಪ್ರಭಾವಿತನನ್ನಾಗಿ ಮಾಡಿತು. ಅವರು ಮುಂದಿನ ಕೋಣೆಯಲ್ಲಿದ್ದ ಸುಪ್ಪತ್ತಿಗೆಯನ್ನು ಹಾಸಿಗೆಯನ್ನಾಗಿ ಮಾಡಿಕೊಂಡು, ಅತ್ಯುತ್ತಮವಾದ ಮಲಗುವ ಕೋಣೆಯನ್ನು ನಮಗೆ ಕೊಟ್ಟಿದ್ದರು! ಕ್ರೈಸ್ತ ಯೋಚನೆಯಲ್ಲಿ, ಅವರು ನಮ್ಮನ್ನು ಮೊದಲನೆಯವರನ್ನಾಗಿ ಮತ್ತು ತಮ್ಮನ್ನು ಕಡೆಯವರನ್ನಾಗಿ ಇಟ್ಟು ಕೊಂಡಿದ್ದರು!

ಈ ದಂಪತಿಗಳ, ಹೊಸ ಒಡಂಬಡಿಕೆಯ ಪ್ರಕಾರವಾಗಿ, ಸಭೆಯ ಚಿಕ್ಕ ಚಿತ್ರವಾಗಿರುವರು. ರಾಜರು ಮತ್ತು ರಾಣಿಯರು ಸಭೆಯನ್ನು ರಚಿಸುವದಿಲ್ಲ; ಸೇವಕರು ರಚಿಸುತ್ತಾರೆ! ಸಭೆಯ ಶಿರಸ್ಸಾದ ನಮ್ಮ ರಕ್ಷಕನು, "... ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. ಹಾಗೆಯೇ ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು" ಎಂದು ಹೇಳಿದನು (ಮತ್ತಾಯ 20:27, 28). ಕ್ರಿಸ್ತನ ಅನುಯಾಯಿಗಳನ್ನು ಕುರಿತು ಪೌಲನು ಬರೆದದ್ದರಲ್ಲಿ ಆಶ್ಚರ್ಯವಿಲ್ಲ, "ಪಕ್ಷಪಾತದಿಂದಾಗಲಿ, ಒಣ ಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ ಪ್ರತಿಯೊಬ್ಬನು ಧೀನಭಾವದಿಂದ ಮತ್ತೊಬ್ಬರನ್ನು

ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ" (ಫಿಲಿಪ್ಪಿ 2:3, 4). ಪೇತ್ರನು ಸಹ ಕ್ರಿಸ್ತನ ಸಭೆಯನ್ನು ಪ್ರಬೋಧಿಸಿದನು. "ಸ್ವತಂತ್ರರಂತೆ ನಡೆದು ಕೊಳ್ಳಿರಿ; ಆದರೆ ಕೆಟ್ಟತನವನ್ನು ಮರೆ ಮಾಡುವದಕ್ಕೆ ನಿಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಬೇಡಿರಿ; ನೀವು ದೇವರ ದಾಸರಾಗಿದ್ದೀರಲ್ಲಾ" (1 ಪೇತ್ರ 2:16).

ಸಭೆಯನ್ನು ಕ್ರಿಸ್ತನ ಸೇವಕರ ದೇಹದಂತೆ ನಾವು ದೃಷ್ಟಿಸದಿದ್ದರೆ, ಕ್ರಿಸ್ತನ ಅಧಿಕೃತ ಸಭೆಯ ಸ್ವಭಾವದ ಮುಖ್ಯ ಅಂಶವನ್ನು ನಾವು ಕಳೆದುಕೊಳ್ಳುತ್ತೇವೆ. ಸಭೆಯ ಅರ್ಥ ಮತ್ತು ಜೀವನದಲ್ಲಿ ಸಮ್ಮಿಳಿತವಾದದ್ದು ಸೇವಕತ್ವದ ತತ್ವ. ವಿಚಾರವು ಕ್ರಿಸ್ತನೊಂದಿಗೆ, ಸಭೆಯ ಸ್ಥಾಪಕ ಹಾಗೂ ಶಿರಸ್ಸಾದವನೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಪ್ರತಿಯೊಬ್ಬ ಸದಸ್ಯನಿಗಾಗಿ ಮುಂದುವರಿದು ಮಟ್ಟವನ್ನು ಏರ್ಪಡಿಸುತ್ತದೆ. ಕ್ರಿಸ್ತನ ಸಭೆಯಾಗಿರುವರೆಂದು ಹೇಳಿಕೊಳ್ಳುವ ಯಾವುದೇ ಸಭೆಯು, ಸ್ಪಷ್ಟವಾದ, ಧೈರ್ಯದ ಸೇವಕತನವನ್ನು ಜಗತ್ತಿನಲ್ಲಿ ತನ್ನ ಜೀವನದಲ್ಲಿ ನೋಡದಿದ್ದರೆ, ಇಲ್ಲದ್ದನ್ನು ಅದು ಹೇಳಿಕೊಳ್ಳುತ್ತದೆ.

ಸಭೆಯ ಈ ಲಕ್ಷಣಕ್ಕೆ ಅತೀ ಹೆಚ್ಚಾದ ಮಹತ್ವವು ಕೊಡಲ್ಪಟ್ಟಿದ್ದರಿಂದ, ಕ್ರಿಸ್ತನ ಸಭೆಯಾದ ನಾವು ಹೇಗೆ ಕ್ರಿಸ್ತನ ಸೇವಕರಾಗಿದ್ದೇವೆ ಎಂಬುದನ್ನು ಜಾರೂಕತೆಯಿಂದ ಯೋಚಿಸತಕ್ಕದ್ದು.

## ಹುದ್ದೆಯ ಹೆಸರಿನಲ್ಲಿ

ಮೊದಲನೆಯದು, ನಮ್ಮ ಹುದ್ದೆಯಲ್ಲಿ ಸೇವಕರಂತೆ ನಮ್ಮ ಪಾತ್ರವನ್ನು ನಾವು ನೋಡುತ್ತೇವೆ. ಸಭೆಯು ಕ್ರಿಸ್ತ ಸೇವಕರಿಂದ ಮಾಡಲ್ಪಟ್ಟಿರುವದನ್ನು ಸಭೆಯ ಬಗ್ಗೆ ಉಪಯೋಗಿಸಲ್ಪಟ್ಟ ವಿವರಣಾತ್ಮಕ ವ್ಯಕ್ತಪಡಿಸುವಿಕೆಯಿಂದ ಹೊಸ ಒಡಂಬಡಿಕೆಯಲ್ಲಿ ಸೂಚಿಸಲಾಗಿದೆ. ಕ್ರಿಸ್ತನು ತನ್ನ ಜನರು ಸೇವಕರಾಗಿರಬೇಕೆಂದು ನಿಶ್ಚಿತವಾಗಿ ಉದ್ದೇಶಿಸಿದನು, ಇಲ್ಲದಿದ್ದರೆ ಆತನು ತನ್ನ ಸಭೆಯನ್ನು ತಾನು ಮಾಡಿದಂತೆ ಗುರುತಿಸುತ್ತಿರಲಿಲ್ಲ.

ಆತನು ತನ್ನ ಹಿಂಬಾಲಕರ ಮಧ್ಯದಲ್ಲಿ ಸೇವಕನ ಚಿತ್ರದೊಂದಿಗೆ ನಿಜವಾದ ದೊಡ್ಡತನವನ್ನು ನಿರೂಪಿಸಿದನು: "ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ, ಮತ್ತು ದೊಡ್ಡವರು ಬಲತ್ಕಾರದಿಂದ ಅಧಿಕಾರ ನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ. ನಿಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವನಾಗಿರ ಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು" (ಮತ್ತಾಯ 20:25, 26). ಕ್ರಿಸ್ತನ ಪ್ರಕಾರವಾಗಿ, ದೊಡ್ಡಸ್ತಿಕೆಯು ಮಾಡಲ್ಪಟ್ಟ ಸೇವೆಯ ಮಾತುಗಳಲ್ಲಿ ನೋಡಲ್ಪಟ್ಟಿದೆ, ಹೊಂದಲ್ಪಟ್ಟ ಸ್ವಾಸ್ಥ್ಯಗಳ ಇಲ್ಲವೇ ಹೊಂದಿಕೊಂಡ ಸ್ಥಾನಗಳ ಮಾತುಗಳಲ್ಲಿ ಅಲ್ಲ.

ಕ್ರಿಸ್ತನಿಗೆ ಮಾರ್ಪಟ್ಟಲ್ಲಿ, ಪೌಲನು ಪಾಪಿಯು ದೇವರ ಮತ್ತು ಕ್ರಿಸ್ತನ ಸೇವಕನಾಗುವದನ್ನು ಚಿತ್ರಿಸಿದ್ದಾನೆ. ಮಾರ್ಪಡುವಿಕೆಯ ಮೊದಲು, ನಾವು ಪಾಪದ ಸೇವಕರಾಗಿದ್ದೆವು, ಆದರೆ ಮಾರ್ಪಾಟದ ನಂತರ, ನಾವು ನೀತಿಯ ಸೇವಕರಾಗಿರುವೆವು (ರೋಮಾಪುರ 6:17, 18). ಕ್ರೈಸ್ತರು ತಮ್ಮಷ್ಟಕ್ಕೆ ತಾವೇ ಒಳಪಟ್ಟವರಲ್ಲ ಆದರೆ ದೇವರ ವೈಯಕ್ತಿಕ ಆಸ್ತಿಯಾಗಿದ್ದಾರೆ: "ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ" (1 ಕೊರಿಂಥ 6:20). ನಾವು ಜೀವಿಸಲಿ ಇಲ್ಲವೇ ಸಾಯಲಿ, ನಾವು

ಕರ್ತನವರಾಗಿದ್ದೇವೆ: "ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವದೂ ಇಲ್ಲ, ತನಗಾಗಿ ಸಾಯುವದೂ ಇಲ್ಲ. ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೆ" (ರೋಮಾಪುರ 14:7, 8).

ದೇವರ ಮತ್ತು ಕ್ರಿಸ್ತನ ಸೇವಕರಾಗಿರುವದರ ತತ್ವವು ಒಬ್ಬರಿಗಾಗಿರುವ ನಮ್ಮ ಸೇವೆಯಲ್ಲಿ ನೈಸರ್ಗಿಕವಾಗಿ ಕಾಣಿಸಿಕೊಳ್ಳಬೇಕು. ಅದಕ್ಕನುಗುಣವಾಗಿ, "ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ" (ಎಫೆಸ 5:21) ಎಂದು ಹೇಳಲ್ಪಟ್ಟಿದ್ದೇವೆ, ನಮ್ಮ ಸ್ವಂತ ಮಾರ್ಗವನ್ನು ಕೇಳುವಂತೆ ಅಲ್ಲ, ಆದರೆ ಯಾವಾಗಲೂ ನಮ್ಮ ಸಹೋದರರ ಯೋಗಕ್ಷೇಮವನ್ನೂ ಆತ್ಮಿಕ ಜೀವಿತವನ್ನೂ ಯೋಚಿಸುವಂತೆ ಮಾಡಬೇಕಾಗಿದೆ. "ನೀನು ತೆಗೆದುಕೊಳ್ಳುವ ಆಹಾರದಿಂದ ನಿನ್ನ ಸಹೋದರನ ಮನಸ್ಸಿಗೆ ನೋವಾದರೆ ನೀನು ಪ್ರೀತಿಗೆ ತಕ್ಕಂತೆ ಇನ್ನು ನಡೆಯುವವನಲ್ಲ. ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು ನಿನಗೆ ಇಷ್ಟವಾದ ಆಹಾರದ ನಿಮಿತ್ತ ಕೆಡಿಸಬಾರದು ... . ಈ ಪ್ರಕಾರವಾಗಿ ಕ್ರಿಸ್ತನ ಸೇವೆಯನ್ನು ಮಾಡುವವನು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೆ" (ರೋಮಾಪುರ 14:15, 18). ಆದುದರಿಂದ, ಕ್ರಿಸ್ತನ ಸೇವಕರಂತೆ "ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಬೇಕು" ಮತ್ತು "ಒಬ್ಬರಿಗಿಂತ ಒಬ್ಬರು ಮುಂದಾಗಿರಬೇಕು" ಎಂದು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ (ರೋಮಾಪುರ 12:10). "ಸಹೋದರರೇ, ನಾವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು. ಆದರೆ ನಿಮಗಿರುವ ಸ್ವಾತಂತ್ರ್ಯವನ್ನು ಶಾರೀರಾಧೀನ ಸ್ವಭಾವಕ್ಕೆ ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ" (ಗಲಾತ್ಯ 5:13) ಎಂದೂ ಸಹ ಆಜ್ಞಾಪಿಸಲ್ಪಟ್ಟಿದ್ದೇವೆ.

ಆತನ ಆಜ್ಞೆಯಂತೆ ಕ್ರಿಸ್ತನ ಸೇವಕರು ಈ ಲೋಕದಲ್ಲಿ ಇರುವರು. ಅವರು ತಮ್ಮ ಸುವಾರ್ತೆಯನ್ನಲ್ಲ, ಆದರೆ ಆತನ ಸುವಾರ್ತೆಯನ್ನು ಪ್ರಸಂಗಿಸುವರು; ಅವರು ತಾವು ಯೋಚಿಸಿದ್ದನ್ನಲ್ಲ, ಆದರೆ ಆತನ ನಿಯೋಗವನ್ನು ನೆರವೇರಿಸಲು ಹುಡುಕುವರು. ಪೌಲನೊಂದಿಗೆ ಅವರು, "ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ" (ಗಲಾತ್ಯ 1:10) ಎಂದು ಹೇಳುತ್ತಾರೆ.

ದೊಡ್ಡ ಅಲೆಕ್ಸಾಂಡರಿನ ಸೇನೆಯಲ್ಲಿಯ ಒಬ್ಬ ಸೈನಿಕ ಬಗ್ಗೆ ಒಂದು ಕಥೆಯು ಹೇಳಲ್ಪಡುತ್ತದೆ. ಯುವ ಸೈನಿಕನ ಮೊದಲನೆಯ ಹೆಸರು ಅಲೆಕ್ಸಾಂಡರ್. ಅಲೆಕ್ಸಾಂಡರ್ ಬಲಶಾಲಿ ಸೈನ್ಯದಲ್ಲಿ ಒಬ್ಬ ಸೈನಿಕನಿಗೆ ಸಂಪೂರ್ಣವಾಗಿ ತಕ್ಕದಲ್ಲದಂಥ ತಪ್ಪನ್ನು ಮಾಡಿದ ಅಪರಾಧಿಯಾಗಿ ಅವನು ಸಿಕ್ಕಿಬಿದ್ದನು. ಅವನ ತಪ್ಪು ವರ್ತನೆಯು ಕಂಡು ಹಿಡಿಯಲ್ಪಟ್ಟಿತು. ನ್ಯಾಯತೀರ್ಪಿಗಾಗಿ ಅರಸನ ಮುಂದೆ ತರಲ್ಪಟ್ಟನು. ಅಲೆಕ್ಸಾಂಡರ್‌ನು ಅವನ ಹೆಸರನ್ನು ಕೇಳಿದನು, "ಅಲೆಕ್ಸಾಂಡರ್" ಎಂದು ಸೈನಿಕನು ಮೆಲ್ಲಗೆ ಹೇಳಿದನು. ದೊಡ್ಡ ಕಮಾಂಡರನು ಉಗ್ರಕೋಪದಿಂದ ಅವನ ಕಡೆಗೆ ನೋಡಿ, "ಸೈನಿಕನೇ, ನಿನ್ನ ಜೀವಿತವನ್ನು ಬದಲಾಯಿಸಿಕೋ ಇಲ್ಲವೇ ನಿನ್ನ ಹೆಸರನ್ನು ಬದಲಾಯಿಸಿಕೋ" ಎಂದು ಹೇಳಿದನು!

ದೇವರ ಪರಿಶುದ್ಧಾತ್ಮನಿಂದ ಸಭೆಗೆ ಒಂದು ಹುದ್ದೆಯ ಹೆಸರು ಕೊಡಲ್ಪಟ್ಟಿದೆ. "ಲೋಕದಲ್ಲಿ ನಾವು ಏನಾಗಿರಬೇಕೆಂದು ಕ್ರಿಸ್ತನು ಬಯಸಿದಂತೆ ಸಭೆಯು ಹೇಗಿರಬೇಕು?" ಎಂಬ ಪ್ರಶ್ನೆಯು ನಿರ್ಣಾಯಕವಾಗಿ ಪರಿಶುದ್ಧ ಬರಹಗಳಲ್ಲಿ ಉತ್ತರಿಸಲ್ಪಟ್ಟಿದೆ:

“ನೀನು ಹುದ್ದೆಗೆ ತಕ್ಕಂತೆ ಜೀವಿಸು. ನೀನು ಏನಾಗಿರಲು ಕರೆಯಲ್ಪಟ್ಟಿರುವಿಯೋ ಅದಾಗಿರು! ಕ್ರಿಸ್ತನ ಸೇವಕರಾಗಿ ಇರ್ರಿ.”

“ಒಬ್ಬನಲ್ಲಿ ಸದ್ಗುಣವನ್ನು ಸೃಷ್ಟಿಸಲಿಕ್ಕೆ ಅತ್ಯುತ್ತಮವಾದ ಮಾರ್ಗವು ಆ ಸದ್ಗುಣವನ್ನು ಅವನಿಗೆ ಹೋಲಿಸುವುದಾಗಿದೆ” ಎಂದು ವಿನ್‌ಸ್ಟನ್ ಚರ್ಚಿಲ್ ಹೇಳಿದನು. ದೇವರು ನಮ್ಮನ್ನು ತನ್ನ ಸೇವಕರು ಎಂದು ಕರೆಯುವದರಿಂದ ಆ ಸದ್ಗುಣವನ್ನು ನಮಗೆ ಅನ್ವಯಿಸುವದರಿಂದ ಸೇವಕತ್ವದ ಸದ್ಗುಣವನ್ನು ತನ್ನ ಜನರಲ್ಲಿ ತುಂಬಿಸುತ್ತಾನೆ.

ನಾವು ಸೇವಕರಾಗಿರುವದರ ಮೊದಲು, ಸೇವಕರು ಯೋಚಿಸುವಂತೆ ನಾವು ಯೋಚಿಸಬೇಕು, ಸೇವಕ ಯೋಚನೆಯನ್ನು ರೂಢಿಸಿಕೊಳ್ಳೋಣ. “ಇದರಿಂದ ನನಗೇನು ದೊರೆಯುತ್ತದೆ?” ಎಂದು ಕೇಳುವುದು ಬೇಡ. ಆದರೆ “ನನ್ನ ಸಹೋದರನಿಗೆ ನಾನು ಹೇಗೆ ಸಹಾಯಕನಾಗಬಹುದು? ಕ್ರಿಸ್ತನಲ್ಲಿ ಬೆಳೆಯಲು ಮತ್ತು ವಿಶ್ವಾಸದಲ್ಲಿ ಬಲವುಳ್ಳವನಾಗಿರಲು ಯಾವ ಅತೀ ಹೆಚ್ಚಾದ ಸಹಾಯದ ಅಗತ್ಯತೆಯಿರುವುದು?” ಎಂದು ಕೇಳೋಣ. “ಕರ್ತನೇ, ಇತ್ತೀಚೆಗೆ ನೀನು ನನಗಾಗಿ ಏನು ಮಾಡಿದ್ದೀ?” ಎಂದು ಕೇಳುವುದು ಬೇಡ, ಆದರೆ “ಕರ್ತನೇ, ನಾನು ಇಲ್ಲಿದ್ದೇನೆ ನನ್ನನ್ನು ಕಳುಹಿಸು” ಎಂದು ಹೇಳೋಣ!

## ಅಪೇಕ್ಷೆಯಲ್ಲಿ

ನಾಮಾಂಕಿತದಲ್ಲಿ ಮಾತ್ರವೇ ನಾವು ಕ್ರಿಸ್ತನ ಸೇವಕರಾಗಿರುವದಿಲ್ಲ, ಆದರೆ ಅಪೇಕ್ಷೆ ಯಲ್ಲಿಯೂ ಆಗಿರುವೆವು. ಆತನ ನಿಜವಾದ ಸಭೆಗೆ ಬೇರೆಯಾವ ಮಹತ್ವಾಕಾಂಕ್ಷೆ ಇರುವದಿಲ್ಲ. ಇತರ ಎಲ್ಲಾ ಅಭಿಲಾಷೆಗಳ ಮೇಲೆ, ಆತನ ಜನರು ಆತನನ್ನು ಸೇವಿ ಸುವದನ್ನು ಹುಡುಕುವರು.

ಕ್ರಿಸ್ತನು ಬರುವ ಮೊದಲು, ನಮಗೆ ನಿರೀಕ್ಷೆಯು ಇರಲಿಲ್ಲ ಮತ್ತು ನಿತ್ಯವಾದ ನಿರಾಶೆಯನ್ನು ಎದುರಿಸಿದೆವು. ಯಾವ ಮನುಷ್ಯನೂ ನಮಗೆ ಸಹಾಯ ಮಾಡುವಂತೆ ಇರಲಿಲ್ಲ. ಜನರಿಂದ ಕಟ್ಟಲ್ಪಡುವ ಯಾವುದೂ ನಮ್ಮನ್ನು ರಕ್ಷಿಸಲಿಕ್ಕಾಗುತ್ತಿರಲಿಲ್ಲ. ಎಲ್ಲಾ ವಿಶ್ವವಿದ್ಯಾಲಯಗಳ ಮತ್ತು ವಿದ್ಯಾಕೇಂದ್ರಗಳ ಕಲಿಯುವಿಕೆಯು ವಿಮೋಚಿತರಾಗಲು ನಮಗೆ ಮಾರ್ಗವನ್ನು ರೂಪಿಸಲಿಕ್ಕಾಗುವಂತೆ ಇರಲಿಲ್ಲ. ನಮಗಿದ್ದ ಒಂದೇ ನಿರೀಕ್ಷೆಯು ದೈವಿಕ ಮಧ್ಯೆ ಪ್ರವೇಶಿಸುವಿಕೆಯಾಗಿತ್ತು.

ಆಗ, ನಮ್ಮ ದೈವಿಕ ರಕ್ಷಕನಾಗಿ, ದೇವರು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ಕೊಟ್ಟನು. ಆತನು ದೈವತ್ವದಲ್ಲಿ ಎರಡನೆಯ ಸದಸ್ಯನಾಗಿದ್ದರೂ ಆತನು ಪೂರ್ಣವಾಗಿ ಮಾನವನಾದನು. ನಿತ್ಯತ್ವದಲ್ಲಿ ದೇವರಂತೆ ಇರುವ ತನ್ನ ಮಹಿಮೆಯ ಸ್ಥಾನವನ್ನು ಆತನು ಬಿಟ್ಟನು ಮತ್ತು ನಮಗಾಗಿ ಮರಣದ ರುಚಿಯನ್ನು ಆತನು ಸವಿಯಲಿಕ್ಕಾಗುವಂತೆ ನಮ್ಮಲ್ಲಿ ಒಬ್ಬನಂತಾದನು (ಇಬ್ರಿಯ 2:9). ಆತನು ಸ್ವಾರ್ಥರಹಿತನಾಗಿ ಪರಲೋಕದ ತನ್ನ ವೈಭವವನ್ನು ಬದಿಗಿಟ್ಟು ಭೂಲೋಕದ ದೀನತೆಯೊಳಗೆ ಪ್ರವೇಶಿಸಿದನು. ಆತನು ಸಂಪೂರ್ಣವಾಗಿ ಮಾನವನಾದನು. ನಾವೆಲ್ಲರೂ ಶ್ರಮೆ ವಹಿಸುವ ರೀತಿಯಲ್ಲಿ ಆತನು ಶ್ರಮೆ ತಾಳಿದನು ಮತ್ತು ನಮ್ಮೆಲ್ಲರ ಹಾಗೆಯೇ ಮರಣಕ್ಕೆ ಒಳಗಾದನು. ಪರಿಪೂರ್ಣ ಜೀವಿತವನ್ನು ನಮ್ಮ ಮುಂದೆ ಆತನು ಪ್ರದರ್ಶಿಸಲಿಕ್ಕಾಗುವಂತೆ ಮತ್ತು ನಮಗಾಗಿ ಪಾಪ ಪ್ರಾಯಶ್ಚಿತ್ತ ಯಜ್ಞವಾಗಿ ತನ್ನ ಜೀವವನ್ನು ಅರ್ಪಿಸಲಿಕ್ಕಾಗುವಂತೆ ಆತನು ಇದೆಲ್ಲವನ್ನೂ ಮಾಡಿದನು. ಪಾಪದ ನಮ್ಮ ಅಪರಾಧವು ದೇವರ ದೈವಿಕ ಕುಮಾರನ ಪಾಪರಹಿತ ಜೀವವು ಮಾತ್ರವೇ ಕ್ರಯಕೊಟ್ಟು ತೀರಿಸಬಹುದಾದಂಥ ಸಾಲವನ್ನು ಸೃಷ್ಟಿಸಿತು.

ಈ ಭೂಲೋಕದ ಮೇಲೆ ಆತನು ಒಂದು ನಿಮಿಷವನ್ನಾದರೂ ಕಳೆಯ ಬೇಕಾಗಿರಲಿಲ್ಲ, ಆದರೆ ಆತನು ನಮ್ಮನ್ನು ಪ್ರೀತಿಸಿದ್ದರಿಂದ ನಮ್ಮನ್ನು ಕಾಪಾಡಬೇಕಾಗಿದ್ದುದರಿಂದ ಆತನು ಬಂದನು. ಬಂದು ಆತಂಕವನ್ನಾಗಲೀ ಇಲ್ಲವೇ ನೋವನ್ನಾಗಲೀ ಆತನು ಸಹಿಸ ಬೇಕಾಗಿರಲಿಲ್ಲ, ಆದರೆ ನಮ್ಮನ್ನು ರಕ್ಷಿಸುವದಕ್ಕಾಗಿ ಆತನು ಊಹಿಸಲಾಗದಂಥ ಶಿಲುಬೆಯ ನೋವನ್ನು ಸಹಿಸಿದನು. ಆತನು ಶಿಲುಬೆಗೆ ಹೋಗಿ ಸಾಯುವಂತೆ ಆತನ ತಂದೆ ಮಾಡಲಿಲ್ಲ; ಆತನು ನಮಗೆ ರಕ್ಷಣೆಯನ್ನು ಒದಗಿಸಲು ಬಯಸಿದ್ದರಿಂದ, ಆತನು ತಾನೇ ಹೋದನು (ಯೋಹಾನ 10:18). ನಮಗಾಗಿ ಆತನ ಪ್ರೀತಿಗೆ ಅಡಗಿಸಿಟ್ಟಿದ್ದ - ವೈಯಕ್ತಿಕವಾಗಿದ್ದ, ಸ್ವಾರ್ಥ ಯೋಜನೆಗಳಿಂದ ಕೂಡಿದ ಕಾರ್ಯ ಸೂಚಿ ಇರಲಿಲ್ಲ, ಅದರಲ್ಲಿ ಕಪಟತನವಿರಲಿಲ್ಲ, ಸುಳ್ಳು ನಟನೆಯಿರಲಿಲ್ಲ, ಆದರೆ ಶುದ್ಧವಾದದ್ದೂ, ಯಥಾರ್ಥವಾದದ್ದೂ ಆಗಿತ್ತು.

ಆದುದರಿಂದ, ವ್ಯಕ್ತಪಡಿಸಲು ಸಾಧ್ಯವಾದ ಮಾತುಗಳನ್ನು ದಾಟಿ ಯೇಸುವಿಗೆ ಉಪಕೃತರಾಗಿರುತ್ತೇವೆ. ಮೊದಲನೆಯದು, ನಾವು ಆತನಿಂದ *ವಿಮೋಚನೆಯನ್ನು* ಹೊಂದಿಕೊಂಡಿದ್ದೇವೆ: "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7); "... ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಭಂಗಾರ ಮೊದಲಾದ ನಶಿಸಿ ಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ" (1 ಪೇತ್ರ 1:18, 19).

ಎರಡನೆಯದು, ನಾವು ಆತನಿಂದ *ಶಾಶ್ವತ ಸಂಪತ್ತನ್ನು* ಹೊಂದಿಕೊಂಡಿದ್ದೇವೆ. ನಮ್ಮ ತಲಾಂತುಗಳೂ ಸ್ವಾಸ್ಥ್ಯಗಳೂ ಆತನಿಂದ ಅಮೂಲ್ಯವುಗಳಾಗಿವೆ. "... ನಿನಗೂ ಇತರರಿಗೂ ತಾರತಮ್ಯ ಮಾಡಿದವರು ಯಾರು? ದೇವರಿಂದ ಹೊಂದದೆ ಇರುವಂಥದು ನಿನ್ನಲ್ಲಿ ಒಂದಾದರೂ ಉಂಟೋ? ಹೊಂದಿದ ಮೇಲೆ ಹೊಂದದವನಂತೆ ನೀನು ಯಾಕೆ ಹಿಗ್ಗಿ ಕೊಳ್ಳುತ್ತೀ?" (1 ಕೊರಿಂಥ 4:7).

ಮೂರನೆಯದು, ಆತನು ನಮಗೆ ಒಂದು *ಗುರುತನ್ನು* ಕೊಟ್ಟಿರುತ್ತಾನೆ. ಆತನ ರಕ್ತದಿಂದ ವಿಮೋಚಿಸಲ್ಪಟ್ಟವರಾಗಿ ಮತ್ತು ಆತನ ಕೃಪೆಯ ಮುಖಾಂತರ ಆತನ ಸೇವೆ ಗಾಗಿ ವರಗಳಿಂದ ತುಂಬಿದವರಾಗಿ, ನಾವು ಆತನ ಮನೆವಾರ್ತೆಯವರಾಗಿದ್ದೇವೆ. ನಾವು ಆತನಿಗೆ ಸಂಪೂರ್ಣವಾಗಿ ಒಳಪಟ್ಟಿರುತ್ತೇವೆ. ಯಾವುದೂ ನಮ್ಮ ಸ್ವಂತದ್ದಾಗಿರುವದೆಂದು ನಾವು ಹೇಳಿಕೊಳ್ಳಲಾರೆವು. ನಮ್ಮ ತಲೆಗೂದಲುಗಳಿಂದ ನಮ್ಮ ಕೈಬೆರಳುಗಳ ತುದಿಗಳ ವರೆಗೆ, ನಮ್ಮ ಪಾದಗಳ ಹಿಮ್ಮಡಿಗಳ ವರೆಗೆ, ನಾವು ಆತನ ಆಸ್ತಿಯಾಗಿರುತ್ತೇವೆ. ನಮ್ಮ ಕೇವಲ ಅಪೇಕ್ಷೆಯು ಆತನ ಸೇವೆ ಮಾಡುವುದಾಗಿರುತ್ತದೆ. ನಮಗಾಗಿ ಆತನು ಮಾಡಿದ್ದರ ಕಾರಣದಿಂದ, ಅದು ನಮಗೆ ಬೇರೆ ರೀತಿಯಲ್ಲಿ ಇರುವದಿಲ್ಲ.

ಅಮೇರಿಕನ್ ಸಿವಿಲ್ ಯುದ್ಧಕ್ಕಿಂತ ಮೊದಲು ಹರಾಜು ಹಾಕಲ್ಪಡಲಿಕ್ಕಿದ್ದ ಗುಲಾಮ ಬಾಲಕಿಯ ಬಗ್ಗೆ ಒಂದು ಕಥೆಯು ಹೇಳಲ್ಪಟ್ಟಿದೆ. ಆಕೆಯು ತನ್ನ ಹದಿವಯಸ್ಸಿನ ಕೊನೆಯಲ್ಲಿ ಇದ್ದಳು. ಬೇರೆ ಪರಿಸ್ಥಿತಿಗಳಲ್ಲಿ, ಆಕೆಗೆ ಜೀವಿಸುವ ಆಸಕ್ತಿ ಮತ್ತು ಆನಂದಕರವಾದ ಪ್ರಯಾಣದೊಂದಿಗೆ ಭವಿಷ್ಯದಲ್ಲಿ ಪ್ರವೇಶಿಸುವ ನಿರೀಕ್ಷೆಯು ಳ್ಳವಳಾಗಿರಬಹುದಿತ್ತು, ಆದರೆ ಆಕೆ ಗುಲಾಮಳಾಗಿದ್ದಳು, ಮತ್ತು ಆಕೆಯ ಕಣ್ಣುಗಳು ಆಕೆಯ ಪ್ರಾಣದ ನಿರಾಶೆಗೊಂಡ ಮಹತ್ವಾ ಕಾಂಕ್ಷೆಯನ್ನು ಪ್ರತಿಬಿಂಬಿಸಿದವು. ಆಕೆಯ ಒಡೆತನಕ್ಕಾಗಿ ಏಲಮಿನಲ್ಲಿ ಬೆಲೆ ಕೇಳಲು ಅವಕಾಶ ಕಾಯುತ್ತಿದ್ದ ಜನರ ಕಡೆಗೆ ಆಕೆ

ಕಣ್ಣೆತ್ತಿ ನೋಡಿದಾಗ, ತನಗೆ ಯಾವ ರೀತಿಯ ಭವಿಷ್ಯವಿರುವುದೋ ಎಂಬುದರ ಬಗ್ಗೆ ಯೋಚಿಸಿ ನಡುಗಿದಳು. ಹರಾಜು ಹಾಕುತ್ತಿದ್ದವನು ಬೆಲೆಗಾಗಿ ಕೂಗಲು ಪ್ರಾರಂಭಿಸಿದಾಗ ಆವನ ಬಲವಾದ ಧ್ವನಿಯು ಗಾಳಿಯಲ್ಲಿ ತುಂಬಿಕೊಂಡಿತು. ಹಣಕೊಡುವ ಪೈಪೋಟಿ ಮೇಲಕ್ಕೇರಿತು. ಅಂತಿಮವಾಗಿ ಹಣದ ಮೊತ್ತ ಏರಿಸುವುದು ನಿಂತಿತು. ಮತ್ತು "ಮಾರಟವಾಯಿತು!" ಎಂದು ಹರಾಜು ಹಾಕುತ್ತಿದ್ದವನು ಹೇಳುವಾಗ ಮೌನ ಆವರಿಸಿತು. ಆ ಯುವತಿ ನೇರದೃಷ್ಟಿಯೊಂದಿಗೆ ನಡುಗಿದಳು. ತನ್ನನ್ನು ಸ್ವಾಸ್ತ್ಯವಾಗಿ ಯಾರು ತೆಗೆದುಕೊಳ್ಳುವರು ಎಂದು ತಿಳಿಯಲು ಜನರ ಮುಖಗಳನ್ನು ದಿಟ್ಟಿಸಿ ನೋಡುತ್ತಾ ಹೋದಳು. ಮಧ್ಯಪ್ರಾಯದ ಒಬ್ಬ ಪುರುಷನು ಜನರ ಗುಂಪಿನೊಳಗಿಂದ ಮುಂದೆ ಬಂದನು. ಮುಂದೆ ಹೆಜ್ಜೆಯಿಟ್ಟು ತಾನು ಕೊಡಲು ಒಪ್ಪಿಕೊಂಡ ಹಣವನ್ನು ಕೊಟ್ಟನು. ಅವನು ತಿರುಗಿಕೊಂಡು ಆಕೆಯ ಕಡೆಗೆ ನಡೆದು ಕೊಂಡು ಹೋದನು. ಆಕೆಯ ತೋಳುಗಳನ್ನು ಹಿಡಿದುಕೊಂಡು, ಜನ ಸಮೂಹದಿಂದ ಹೊರಗೆ ನಡಿಸಿಕೊಂಡು ಹೋದನು ಆಕೆಗೆ ಒಂದು ಮಾತೂ ಹೇಳದೇ ಅವನು ಒಂದು ಕಾಗದವನ್ನು ತೆಗೆದುಕೊಂಡು, ಅದರ ಮೇಲೆ, "ಈ ದಿನದಂದು ನಾನು ನಿನ್ನನ್ನು ಕಂಡು ಕೊಂಡಿದ್ದೇನೆ, ನಾನು ನಿನಗೆ ನಿನ್ನ ಸ್ವಾತಂತ್ರ್ಯವನ್ನು ಕೊಟ್ಟಿದ್ದೇನೆ" ಎಂದು ಬರೆದನು. ಪುಟದ ಕೆಳಗೆ, ಅವನು ತನ್ನ ಹೆಸರನ್ನು ರುಜುಹಾಕಿ, ಆ ಸ್ವಾತಂತ್ರ್ಯದ ದಾಖಲೆಯನ್ನು ಆ ಯುವತಿಗೆ ಕೊಟ್ಟನು. ನಡುಗುವ ಕೈಗಳಿಂದ, ಕಂಪಿಸುವ ದೇಹದಿಂದ, ನಿಯಂತ್ರಿಸಲಾಗದ, ಭಾವೋದ್ವೇಗದಿಂದ, ಆ ಪೇಪರನ್ನು ತನ್ನ ಎದೆಗಿಟ್ಟುಕೊಂಡಳು, ಇದು ನಿಜವೋ ಕನಸೋ ಎಂದು ಆಶ್ಚರ್ಯಪಟ್ಟಳು. ಸಂಭವಿಸಿದ್ದರ ಪೂರ್ಣ ಅರ್ಥವಾದಾಗ ಕುಸಿದು ಬಿದ್ದಳು, ಆ ಮನುಷ್ಯನ ಪಾದಗಳಿಗೆ ಒರಗಿ, "ಅಯ್ಯಾ, ನಾನು ಸಂತೋಷದಿಂದ, ಮನಃ ಪೂರ್ವಕವಾಗಿ, ಉಚಿತವಾಗಿ ನಾನು ನಿನ್ನ ಸೇವಕಳಾಗಿರುವೆನು" ಎಂದು ಹೇಳಿದಳು.

ಆಕೆಯ ಚಿತ್ರವು ಸಭೆಯ ಚಿತ್ರವೂ ಆಗಿರುವುದು. ನಾವು ಪಾಪದ ಗುಲಾಮರಾಗಿದ್ದೆವು. ಸೈತಾನನಿಗೆ ಗುಲಾಮಗಿರಿಯಲ್ಲಿ ದುರ್ದೆಶೆಯ ಜೀವಿತಕ್ಕೆ ಗುರಿಯಾಗಿದ್ದೆವು. ಅವನ ದುಷ್ಟ ಒತ್ತಡಗಳಿಂದ ಅಪೇಕ್ಷೆಗಳಿಂದ ದಬ್ಬಾಳಿಕೆಗೆ ಗುರಿಯಾಗಿದ್ದೆವು, ಆದರೆ ಯೇಸುವು ತನ್ನ ರಕ್ತದಿಂದ ನಮ್ಮನ್ನು ಕೊಂಡು ಕೊಂಡನು ಮತ್ತು ನಮ್ಮನ್ನು ವಿಮೋಚಿಸಿದನು. ಈಗ ನಾವು ಆತನಿಗಾಗಿ ಜೀವಿಸುವೆವು. ನಾವು ಆತನ ಪಾದಗಳ ಬಳಿ ಅಡ್ಡ ಬಿದ್ದು ಸಾಯದ ಪ್ರೀತಿಯಲ್ಲಿ ಮತ್ತು ನಮಗಾಗಿ ಆತನು ಮಾಡಿದ್ದಕ್ಕಾಗಿ ಮೆಚ್ಚಿಕೆಯಲ್ಲಿ ಆತನಿಗೆ ನಮ್ಮ ನಿಷ್ಠೆಯ ಪ್ರತಿಜ್ಞೆ ಮಾಡಿರುವೆವು.

ಕ್ರಿಸ್ತನ ಸೇವಕನಾಗಲಿಕ್ಕೆ ಬಯಸದ ಯಾವುದೇ ಕ್ರೈಸ್ತನು, ತಾನು ಕ್ರಿಸ್ತನಿಗೆ ಏನು ಕೊಡಬೇಕೆಂಬ ಹಂಗಿನ ಬಗ್ಗೆ ಸಂಪೂರ್ಣವಾಗಿ ಕೇಂದ್ರೀಕರಿಸುವದಿಲ್ಲ. ಅತನಿಲ್ಲದೇ ನಾವು ಏನೂ ಆಗಿರುವದಿಲ್ಲ. ನಿಮ್ಮ ಮನಸ್ಸಿನಲ್ಲಿ ಶೂನ್ಯವನ್ನು ಎಳೆಯಿರಿ, ಮತ್ತು ಆ ಶೂನ್ಯದಲ್ಲಿಯ ರಂಧ್ರವನ್ನು ಭೂಮಿಗಿಂತ ಹೆಚ್ಚು ದೊಡ್ಡದಾಗಿರುವಂತೆ ವಿಸ್ತರಿಸಿರಿ. ಆಗ ಮಾತ್ರವೇ ಕ್ರಿಸ್ತನಿಲ್ಲದೇ ನಾವು ಏನಾಗಿರುವಂತೆ ಇರುವೆವು ಎಂಬುದನ್ನು ಆ ಶೂನ್ಯವು ಉದಾಹರಿಸುವುದು! ಕ್ರಿಸ್ತನಿಲ್ಲದೇ ನಾವು ಏನೂ ಇಲ್ಲದ್ದಕಿಂತ ಕಡಿಮೆಯಾಗಿರುವೆವು! ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ ಎಂಬುದರ ಅರುಹು, ಆತನಿಗೆ ದೈನಂದಿನ ಸೇವೆಯಲ್ಲಿ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಮ್ಮನ್ನು ಒತ್ತಾಯ ಪಡಿಸುವುದು.

## ಪ್ರದರ್ಶನದಲ್ಲಿ

ಮೂರನೆಯದು, ನಾವು, ಕ್ರಿಸ್ತನ ಸಭೆಯು, ಪ್ರದರ್ಶನದಲ್ಲಿ ಕ್ರಿಸ್ತನ ಸೇವಕರಾಗಿದ್ದೇವೆ. ನಾವು ಜೀವಿಸಲು ಕರೆಯಲ್ಪಟ್ಟ ಜೀವಿತವು, ನಮಗಿರುವ ಸೇವೆಯು, ಮತ್ತು ನಾವು ಪ್ರಸಂಗಿಸುವ ಸಂದೇಶವು ಸೇವಕತನದ ಆತ್ಮವನ್ನು ಪ್ರತಿಬಿಂಬಿಸುತ್ತದೆ.

ಸೇವಕತ್ವವು ಯಾವಾಗಲೂ ಕ್ರೈಸ್ತ ಜೀವಿತದ ಹೃದಯವಾಗಿದೆ. ಇದು ಸತ್ಯವಾಗಿದೆ ಯಾಕಂದರೆ ಕ್ರೈಸ್ತ ಜೀವಿತವು "ಕ್ರಿಸ್ತನು ನಮ್ಮಲ್ಲಿ" ಇರುವ ಜೀವಿತವಾಗಿದೆ, ಮತ್ತು ಕ್ರಿಸ್ತನು ಲೋಕವು ನೋಡಿದವರಲ್ಲಿ ಅತಿ ದೊಡ್ಡ ಸೇವಕನಾಗಿದ್ದಾನೆ. "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವ ಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20). ಹೀಗಿರುವದರಿಂದ ಪೌಲನು ಸೇವಕ ಜೀವನವನ್ನು ಜೀವಿಸುವದನ್ನು ನೋಡುವುದು ನಮಗೆ ಆಶ್ಚರ್ಯಕರವಾದದ್ದನ್ನಾಗಿ ಮಾಡುವದಿಲ್ಲ: ಅವನು ಸ್ವಾರ್ಥವಿಲ್ಲದವನೂ ತ್ಯಾಗ ಮಾಡುವವನೂ ಆಗಿದ್ದನು; ಸ್ವಾರ್ಥಿಯೂ ಸ್ವಾರ್ಥ ಸಾಧಕನೂ ಆಗಿರಲಿಲ್ಲ "ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ" (ಫಿಲಿಪ್ಪಿ 2:5) ಎಂದು ಅವನು ನಮಗೆ ಬರೆದನು. ಅವನ ಬೋಧನೆಯನ್ನು ಅನುಸರಿಸಿದರೆ ಮತ್ತು ಕ್ರಿಸ್ತನ ಮನಸ್ಸಿನೊಂದಿಗೆ ಜೀವಿಸಿದರೆ, ನಾವು ಇತರರ ಬಗ್ಗೆ ಯೋಚಿಸುವೆವು ಹಾಗೂ ಇತರರಿಗಾಗಿ ಜೀವಿಸುವೆವು:

> ... ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶ್ಯನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು (ಫಿಲಿಪ್ಪಿ 2:6-8).

ಕ್ರಿಸ್ತನ ಮನಸ್ಸು ತನ್ನನ್ನು ಬರಿದು - ಮಾಡಿಕೊಳ್ಳುವ ಮನಸ್ಸಾಗಿದೆ. ತನ್ನ ಪರಲೋಕದ ಮಹಿಮೆಯನ್ನು ಆತನು ಬದಿಗಿಟ್ಟನು, ಮನುಷ್ಯರ ಸೇವಕನಾದನು, ತನ್ನ ಸ್ವಂತ ಸೃಷ್ಟಿಯಾದನು, ಮತ್ತು ಮಾನವನ ರಕ್ಷಣೆಗಾಗಿ ಶಿಲುಬೆಗೆ ಹಾಕಲ್ಪಡಲು ಒಪ್ಪಿಸಿಕೊಟ್ಟನು. ನಾವು ಆತನ ಮನಸ್ಸಿನೊಂದಿಗೆ ಜೀವಿಸಿದರೆ, ಜನರಿಗೆ ಸೇವೆ ಮಾಡುವ ಪಾತ್ರಕ್ಕಿಂತ ಬೇರೆ ಪಾತ್ರವನ್ನು ನಾವು ತುಂಬಲಿಕ್ಕಿಲ್ಲ.

ಸೇವಕತ್ವವಿಲ್ಲದೆ ಕ್ರಿಸ್ತನು ತನ್ನ ಜನರಿಗೆ ಕೊಟ್ಟ ನಿಯೋಗವು ಕಾರ್ಯರೂಪಕ್ಕೆ ಬರಲಾಗದು. ಯೇಸುವು ತನ್ನ ಮಿತಿಯುಳ್ಳ ಸೇವೆಗೆ ತನ್ನ ಶಿಷ್ಯರನ್ನು ಕಳುಹಿಸಿದಾಗ ಅವರಿಗೆ, "ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ" (ಮತ್ತಾಯ 10:8ಬಿ) ಎಂದು ಹೇಳಿದನು. ಆತನು ತನ್ನ ಶಿಷ್ಯರಿಗೆ ತನ್ನ ಅಂತಿಮ, ವಿಶ್ವವ್ಯಾಪ್ತಿ ನಿಯೋಗವನ್ನು ಕೊಟ್ಟಾಗ, ಸೇವಕತ್ವವನ್ನು ಆಜ್ಞಾಪಿಸಿದನು: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಆತನ ಆಜ್ಞೆಯನ್ನು ಕೈಕೊಳ್ಳುವದಕ್ಕಾಗಿ ನಮ್ಮಲ್ಲಿ ಅನೇಕರು ನಾವು ಪ್ರೀತಿಯಿಂದ ಹಿಡಿದುಕೊಂಡ ಸಂಸ್ಕೃತಿಯನ್ನು, ಜನರನ್ನು ಮತ್ತು ಸ್ವಾಸ್ಥ್ಯಗಳನ್ನು ಹಿಂದೆ ಬಿಟ್ಟು ಹೋಗಲು ಸಿದ್ಧರಾಗಬೇಕಾಗುತ್ತದೆ;

ಹಾಗೂ ಉಳಿದ ನಾವು ಹೋಗುವವರಿಗಾಗಿ ತ್ಯಾಗ ಪೂರ್ವಕವಾಗಿ ಕೊಡಲು ಮನಸ್ಸುಳ್ಳವರಾಗಬೇಕಾಗುತ್ತದೆ. ನಮಗಾಗಿ ಉಪಯೋಗಿಸಲ್ಪಡಬಹುದಾದ ಹಣವನ್ನು ಬಿಟ್ಟುಕೊಡ ಬೇಕಾಗುತ್ತದೆ. ಹೋಗುವವರು ಮತ್ತು ಕಳುಹಿಸುವವರು ಸೇವಕರ ಪಾತ್ರವನ್ನು ನೆರವೇರಿಸುತ್ತಿದ್ದಾರೆ. ಐಶ್ವರ್ಯವಂತನಾಗಲು ಯಾರೂ ಮಿಶನ್ ಫೀಲ್ಡಿಗೆ ಹೋಗುವದಿಲ್ಲ, ಮತ್ತು ಐಶ್ವರ್ಯವಂತರಾಗಲು ಯಾರು ಕೊಡುವದಿಲ್ಲ. ಇಬ್ಬರೂ ಕ್ರಿಸ್ತನ ಸೇವಕರಂತೆ ಅವರು ಮಾಡುವದನ್ನು ಮಾಡುತ್ತಾರೆ.

ನಾವು ಪ್ರಸಂಗಿಸುವ ಸಂದೇಶವು ನಮ್ಮ ಸ್ವಂತದ್ದಲ್ಲ. ನಾವು ಪತ್ರವನ್ನು ಬರೆಯಲಿಲ್ಲ; ಕ್ರಿಸ್ತನು ಬರೆದ ಪತ್ರವನ್ನು ವಿತರಿಸುವ ಸಾರ್ವಜನಿಕರ ಸೇವಕರು ಮಾತ್ರ ನಾವಾಗಿದ್ದೇವೆ. ಆತನು ಕಳುಹಿಸಿದ ಸಂದೇಶವು ಕೆಡಿಸಲ್ಪಡದಂತೆ ಇಲ್ಲವೇ ಅಸ್ಪಷ್ಟವಾಗಿ ಮಾಡದಂತೆ ಅದನ್ನು ನಾವು ನೋಡಿಕೊಳ್ಳುತ್ತೇವೆ. ಅದನ್ನು ಪುನಃ ಬರೆಯಬೇಕೆಂದು ನಮ್ಮ ಅರಸನಿಂದ ಆಜ್ಞೆಯಿರುವದಿಲ್ಲ; ಅದು ಅಚ್ಚುಕಟ್ಟಾಗಿ ಕೊಡಲ್ಪಡಬೇಕೆಂದು ನಾವು ಆಜ್ಞಾಪಿಸಲ್ಪಟ್ಟಿದ್ದೇವೆ. ಈ ಸಂದೇಶವಿಲ್ಲದೇ ಜಗತ್ತು ತಪ್ಪಿ ಹೋಗಿದೆ ಎಂಬುದನ್ನು ನಾವು ಬಲ್ಲೆವು. ಆದುದರಿಂದ, ಕರುಣೆ ಮತ್ತು ವಾತ್ಸಲ್ಯದಿಂದ ಪ್ರತಿಯೊಂದು ಗ್ರಹಿಸುವ ಮಾರ್ಗದಿಂದ ಆತನ ಸಂದೇಶವನ್ನು ಚಿತ್ತರಿಸುತ್ತೇವೆ - ಅಚ್ಚಾದ ಪುಟದ ಮುಖಾಂತರ, ರೇಡಿಯೋ, ದೂರದರ್ಶನ, ಪೀಠಗಳಿಂದ, ವೈಯಕ್ತಿಕ ಸಂಪರ್ಕಗಳಿಂದ ಮತ್ತು ದೈನಂದಿನ ಉದಾಹರಣೆಯಿಂದ ಹೇಳುತ್ತೇವೆ. ನಮ್ಮ ಸ್ವಂತ ವೈಯಕ್ತಿಕ ಅನುಕೂಲತೆಗಿಂತ ಹಾಗೂ ಕನಸುಗಳಿಗಿಂತ ಮೇಲೆ ಆತನ ಸಂದೇಶ ವನ್ನು ಮೊದಲಾಗಿ ಇಡುತ್ತೇವೆ. ಅದರ ಪ್ರಸಂಗಿಸುವಿಕೆಗಾಗಿ ನಮ್ಮ ವರಗಳನ್ನು, ನಮ್ಮ ಹಣವನ್ನು, ನಮ್ಮ ಸಮಯವನ್ನು, ನಮ್ಮ ಮನಸ್ಸುಗಳನ್ನು, ನಮ್ಮ ಕೈಗಳನ್ನು, ನಮ್ಮ ಕಾಲುಗಳನ್ನು - ಹೌದು, ನಮ್ಮ ಹೃದಯಗಳನ್ನೂ ಕೊಡುತ್ತೇವೆ.

ನಮ್ಮ ಅರಸನು ಎಲ್ಲಾ ಅರಸರುಗಳಿಗಿಂತ ಬಹಳ ಭಿನ್ನವಾದವನಾಗಿರುತ್ತಾನೆ! ಆತನು ಅರಸರುಗಳ ಅರಸನೂ, ಸೃಷ್ಟಿಕರ್ತನೂ ಮತ್ತು ವಿಶ್ವದ ಎಲ್ಲವುಗಳನ್ನು ಕಾಪಾಡಿಕೊಂಡು ಹೋಗುವವನೂ ಆಗಿರುತ್ತಾನೆ. ಆತನು ನಮ್ಮ ಮಧ್ಯದಲ್ಲಿ ಸೇವಕನಂತೆ ಜೀವಿಸಿದನು. ವಿಶೇಷವಾಗಿ ಈ ಸತ್ಯವು ಕೊನೆಯ ಭೋಜನದಲ್ಲಿ ಯೇಸುವು ತನ್ನ ಶಿಷ್ಯರ ಪಾದಗಳನ್ನು ತೊಳೆದ ಘಟನೆಯ ಮುಖಾಂತರ ಹೊಳೆಯುತ್ತದೆ (ಯೋಹಾನ 13:1-16). ಭೂಲೋಕದ ಅರಸನು ನಮ್ಮ ಮಧ್ಯದಲ್ಲಿ ಬರುವಾಗ ಜನರು ಅವನ ಮುಂದೆ ಬಾಗುವರು, ಹಾಗೂ ಅವನನ್ನು ಸ್ಪರ್ಷಿಸಲು ಮುಂದೆ ಹೋಗುವರು. ಪೋಪನು ತನ್ನ ಜನರ ಮಧ್ಯದಲ್ಲಿ ಬರುವಾಗ, ಅವರು ಅವನ ಮುಂದೆ ಬಾಗುವರು ಮತ್ತು ಅವನ ಹಸ್ತಕ್ಕೆ ಮುದ್ದು ಕೊಡುವರು. ಹೀಗಿದ್ದರೂ, ತನ್ನ ಮರಣದ ಹಿಂದಿನ ರಾತ್ರಿಯಲ್ಲಿ ಕ್ರಿಸ್ತನು ತನ್ನ ಶಿಷ್ಯರೊಂದಿಗೆ ಇದ್ದಾಗ, ಆತನು ಬೇಗುಣಿಯಲ್ಲಿ ನೀರನ್ನು ತುಂಬಿಸಿ ಅವರ ಪಾದಗಳನ್ನು ತೊಳೆದನು.

ಅದನ್ನು ಯಾಕೆ ಆತನು ಮಾಡಿದನು? ಆತನು ಮಾಡ ಬೇಕಾಗಿದ್ದರಿಂದ ಅಲ್ಲ ಇಲ್ಲವೇ ಬೇರೆ ಯಾರೂ ಮಾಡಲಾರರೆಂದಲ್ಲ. ಒಂದು ದೃಷ್ಟಾಂತವು ತನ್ನ ಶಿಷ್ಯರಿಗೆ ಬೆಲೆಯುಳ್ಳದ್ದಾಗಿರುವದೆಂದು ಆತನು ತಿಳಿದದ್ದರಿಂದ ಆತನು ಅದನ್ನು ಮಾಡಲಿಲ್ಲ. ತಾನು ಯಾರಾಗಿರುವೆನು ಎಂಬ ಕಾರಣದಿಂದ - ಆತನು ದೇವರ ಕುಮಾರನಾಗಿರುವದರಿಂದ ಮತ್ತು ಜನರ ಸೇವಕನಾಗಿದ್ದುದರಿಂದ ಆತನು ಅದನ್ನು ಮಾಡಿದನು. ಆತನು ಒಬ್ಬ ಸೇವಕನಂತೆ ಬಂದನು, ಒಬ್ಬ ಸೇವಕನಂತೆ ಜೀವಿಸಿದನು, ಮತ್ತು ಒಬ್ಬ ಸೇವಕನಂತೆ ಮರಣಹೊಂದಿದನು. ನಡೆಯುವಂತೆ ಮತ್ತು ತಿನ್ನುವಂತೆ ಆತನಿಗೆ ಇತರರಿಗೆ ಸೇವೆ ಮಾಡುವಂಥದ್ದು ನೈಸರ್ಗಿಕವಾದದ್ದಾಗಿತ್ತು. ನಾವು ಯಾರಾಗಿರುವೆವೋ ಆ ಕಾರಣದಿಂದ,

ಆತನು ತನ್ನ ಅನುಯಾಯಿಗಳನ್ನು ಅದೇ ರೀತಿಯ ಜೀವಿತಕ್ಕೆ ಕರೆಯುತ್ತಾನೆ:

> "ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವದು ಸರಿ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ. ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ. ದಣಿಗಿಂತ ಆಳು ದೊಡ್ಡವನಲ್ಲ, ಕಳುಹಿಸಲ್ಪಟ್ಟವನು ಕಳುಹಿಸಿದವನಿಗಿಂತ ದೊಡ್ಡವನಲ್ಲ" (ಯೋಹಾನ 13:13-16).

ಯೇಸುವು ನಡೆದಂತೆ ನಾವು ನಡೆಯಬೇಕು. ಇತರರಿಗಾಗಿ ಸೇವೆಯ ಮೇಲೆ ನಮ್ಮ ವಿಚಾರಗಳನ್ನು ಕೇಂದ್ರೀಕರಿಸದೇ ಯಥಾರ್ಥವಾದ ಕ್ರೈಸ್ತ ಜೀವಿತದಲ್ಲಿ ನಾವು ತೊಡಗಲಾರೆವು ಎಂಬ ಸಂದೇಶ ಹಾಗೂ ಕ್ರೈಸ್ತ ಜೀವಿತ, ಸೇವೆಯಲ್ಲಿ ಸೇವಕತ್ವವು ಸುತ್ತಿಕೊಂಡಿರುತ್ತದೆ.

ಸೇವಕನ ಜೀವಿತವನ್ನು ನೀನು ಹೇಗೆ ಜೀವಿಸಬಹುದು ಎಂದು ನೀನು ಆಶ್ಚರ್ಯಪಡುತ್ತಿರುವಾಗ, ಕ್ರಿಸ್ತನು ನಿನಗೆ ಮಾಡಬೇಕೆಂದು ಹೇಳಿದ್ದನ್ನು ಮಾಡು, ಸೇವಕನಾಗಿರದೆ ನೀನು ಆತನ ಚಿತ್ತವನ್ನು ಕೈಕೊಳ್ಳಲಾರಿ ಎಂಬುದನ್ನು ಕಂಡುಕೊಳ್ಳುವಿ. ನೀನು ಸೇವಕನಾಗಿರದಿದ್ದರೆ ನೀನು ಮಾಡಬೇಕೆಂದು ಆತನು ನಿನಗೆ ಹೇಳಿದ ರೀತಿಯಲ್ಲಿ ಇತರರಿಗೆ ಸುವಾರ್ತೆಯನ್ನು ಬೋಧಿಸಲಾರಿ; ಬಡವರಿಗಾಗಿ ಸೇವಕನಾಗಿರದೇ ಆತನು ಮಾಡಬೇಕೆಂದು ಹೇಳಿದ ರೀತಿಯಲ್ಲಿ ಜೋಪಾಸನೆ ಮಾಡಲಾರಿ; ಒಬ್ಬ ಸೇವಕನ ಹೃದಯವಿಲ್ಲದೆ ನೀನು ಆತನು ನಿನಗೆ ಕೊಟ್ಟ ನಿಯೋಗವನ್ನು ಪೂರೈಸಲಾರಿ.

## ಮುಕ್ತಾಯ

ಸಭೆಯು ಕ್ರಿಸ್ತನ ಸೇವಕರಿಂದ ರಚಿಸಲ್ಪಟ್ಟಿದೆಯೆಂದು ಹೊಸ ಒಡಂಬಡಿಕೆಯು ಸ್ಪಷ್ಟಪಡಿಸುತ್ತದೆ. ಅಂಕಿತದಲ್ಲಿ, ಅಪೇಕ್ಷೆಯಲ್ಲಿ ಮತ್ತು ಪ್ರದರ್ಶನದಲ್ಲಿ ನಾವು ಸೇವಕರಾಗಿದ್ದೇವೆ. ಶಿಲುಬೆಯ ಅಡಿಯಲ್ಲಿಯ ನೆಲವು ಸಮಪಾತಳಿಯಲ್ಲಿದೆ. ಯಾವುದೇ ಸೇವಕನು ಇನ್ನೊಬ್ಬನಿಂದ ಮೇಲಕ್ಕೇರಿಸಲ್ಪಟ್ಟಿರುವದಿಲ್ಲ ಮತ್ತು ಯಾವುದೇ ಸೇವಕನು ಇನ್ನೊಬ್ಬನ ಕೆಳಗೆ ಇಡಲ್ಪಟ್ಟಿರುವದಿಲ್ಲ. ನಾವೆಲ್ಲರೂ ಕೇವಲ ಸೇವಕರಾಗಿದ್ದೇವೆ.

ಕ್ಲೊವಿಸ್ ಚಾಪ್ಪೆಲ್ ಹಡಗಿನಲ್ಲಿ ತಾನು ಮಹಾಸಾಗರವನ್ನು ದಾಟಿದ್ದರ ಬಗ್ಗೆ ಹೇಳಿದನು. ಈ ರೀತಿಯ ಪ್ರಯಾಣವು ಅವನಿಗೆ ಮೊದಲನೆಯದಾಗಿತ್ತು, ಮತ್ತು ಪ್ರಯಾಣವು ಅವನಿಗೆ ಅತಿಯಾದದ್ದಾಗಿತ್ತು, ಅವನು ಎದ್ದು ನಿಂತು ಕೊಳ್ಳಲಾರದಷ್ಟು ಸೀಸಿಕ್‌ನೆಸ್ ಅವನನ್ನು ಪೀಡಿಸಿತು. ಅವನು ಮಲಗುತ್ತಿದ್ದದು ಮೇಲಿನ ಬಂಕ್ ಆಗಿತ್ತೆಂದು ಹೇಳಿದನು. ಹಾಗೂ ಆ ಮೇಲಿನ ಬಂಕ್ ಅವನಿಗೆ ಸಹಿಸದಷ್ಟಾಗಿತ್ತು. ತಾನು ಸಾಯಲಿಕ್ಕಿದ್ದೇನೆಂದು ಯೋಚಿಸಿದೆನೆಂದು ಹೇಳಿದನು. ಅವನ ಕೆಳಗಿನ ಬಂಕ್‌ದಲ್ಲಿ ಇದ್ದವನು, ಅವನಿಗೆ ಸಂಪೂರ್ಣವಾಗಿ ಅಪರಿಚಿತನಾಗಿದ್ದವನು, ಅವನು ಎಷ್ಟು ಅಸ್ವಸ್ಥನಾಗಿದ್ದಾನೆಂಬುದನ್ನು ನೋಡಿ, ಕೂಡಲೇ ತಾವು ಬಂಕನ್ನು ಬದಲಾಯಿಸಿ ಕೊಳ್ಳೋಣ ಎಂದು ಸೂಚಿಸಿದನು. ಒಬ್ಬ ರೋಗಿಗೆ ನರ್ಸಿನಂತೆ ಅವನಿಗೆ ಸಹಾಯ ಮಾಡಲು ಪ್ರಾರಂಭಿಸಿದನು. ಚಾಪೆಲ್ಲನ ಯಾವುದೇ ಬೇಡಿಕೆಯಿಲ್ಲದೇ ಅವನು ಬಹಳ ಜಾಗರೂಕತೆಯಿಂದ ಅವನ ಅಗತ್ಯತೆಗಳನ್ನು ಪೂರೈಸಲು ಸಿದ್ಧನಾದನು. ಅವನಿಗೆ

ಸೇವಕತ್ವವು ಜೀವನದ ಮಾರ್ಗವಾಗಿರುವದರ ಕಾರಣದಿಂದ ಅನೇಕ ವರ್ಷಗಳ ವರೆಗೆ ಅವನನ್ನು ಜ್ಞಾಪಿಸಿಕೊಂಡೆನೆಂದು ಚಾಪ್ಪೆಲ್ ಹೇಳಿದನು. ಅವನು ಸೇವಕನು ಯೋಚಿಸಿದಂತೆ ಯೋಚಿಸಬೇಕು ಮತ್ತು ಹೀಗೆ, ಅವನು ಇದ್ದಲ್ಲೆಲ್ಲಾ, ಮನೆಯಲ್ಲಿರಲಿ, ವಿದೇಶದಲ್ಲಿರಲಿ, ಅವನು ಸೇವಕನಂತೆ ಜೀವಿಸಿದನು.

ಕ್ರಿಸ್ತನ ಅನುಯಾಯಿಗಳು ತಮ್ಮ ಕೂದಲನ್ನು ಚಾಚಿಕೊಳ್ಳುವಂತೆ ಇಲ್ಲವೇ ನಡೆಯುವುದನ್ನು ತೆಗೆದುಕೊಳ್ಳುವಂತೆ, ಒಂದು ಗ್ಲಾಸ್ ನೀರನ್ನು ಕುಡಿಯುವಂತೆ ಇಲ್ಲವೇ ಊಟಮಾಡುವಂತೆ ನೈಸರ್ಗಿಕವಾಗಿ ಸೇವಕರಾಗಿರುವದನ್ನು ಕಂಡು ಕೊಳ್ಳಬೇಕು. ಸ್ವಾರ್ಥ ಕೇಂದ್ರೀಕರಣದಿಂದ ಕುಮಾರ - ಕೇಂದ್ರೀಕರಣಕ್ಕೆ ನಮ್ಮ ಜೀವಿತಗಳು ಮಾರ್ಪಡಿಸಲ್ಪಟ್ಟಿವೆ ಹಾಗೂ ಇದರ ಅರ್ಥ ಕೇವಲ ಒಂದೇ ಸಂಗತಿ ಯಾಗಿರುತ್ತದೆ ಅದು ಸೇವಕತ್ವ.

ಕ್ರಿಸ್ತನ ಆಮಂತ್ರಣವು ಪಾಪಿಗಳಿಗೆ ರಕ್ಷಣೆಗೆ ಮತ್ತು ಸೇವಕತ್ವಕ್ಕೆ ಬರುವಂಥದ್ದಾಗಿದೆ. ಆತನು ನಮಗೆ "ಬನ್ನಿರಿ" (ಮತ್ತಾಯ 11:28, 29) ಮತ್ತು "ಹೋಗಿರಿ" (ಮತ್ತಾಯ 28:19, 20) ಎಂದು ಹೇಳುತ್ತಾನೆ. ಬರುವ ಯಾರನ್ನಾದರೂ ಆತನು ಸ್ವೀಕರಿಸುತ್ತಾನೆ, ಆದರೆ ಅವನು ಬರುವಾಗ ಅವನಿದ್ದಂತೆ ಆತನು ಯಾರನ್ನೂ ಹಾಗೆಯೇ ಬಿಡುವದಿಲ್ಲ. ಆತನು ಪಾಪಿಗಳಂತೆ ನಮ್ಮನ್ನು ಸ್ವೀಕರಿಸುತ್ತಾನೆ, ಆದರೆ ಜನರ ಸೇವಕರನ್ನಾಗಿ ನಮ್ಮನ್ನು ಬದಲಾಯಿಸುತ್ತಾನೆ. ಆದುದರಿಂದ, ಆತನ ನಿಜವಾದ ಸಭೆಯು ಸೇವಕನ ಸೇವಕರಿಂದ ಮಾಡಲ್ಪಟ್ಟಿರುತ್ತದೆ.

ನೀನು ಕ್ರಿಸ್ತನ ಸೇವಕನಾಗಿರುವಿಯೋ?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. "ಸೇವಕ" ಎಂಬುದನ್ನು ಸಂಕ್ಷೇಪವಾಗಿ ವಿವರಿಸಿರಿ.
2. "ನಾವು ಸ್ವತಂತ್ರರಾಗಿದ್ದರೂ ಕ್ರಿಸ್ತನ ದಾಸರಾಗಿದ್ದೇವೆ" ಎಂಬ ಹೇಳಿಕೆಯನ್ನು ಚರ್ಚಿಸಿರಿ.
3. ಕ್ರಿಸ್ತನ ಪ್ರಕಾರವಾಗಿ ಸೇವಕತ್ವವು ದೊಡ್ಡಸ್ತಿಕೆಗೆ ಹೇಗೆ ನಡಿಸುತ್ತದೆ ಎಂಬುದನ್ನು ವಿವರಿಸಿರಿ (ಮತ್ತಾಯ 20:25, 26).
4. "ನೀತಿಯ ಸೇವಕ"ನಾಗಿರುವುದು ಎಂಬುದರ ಅರ್ಥವೇನು?
5. ನಾವು ಕ್ರಿಸ್ತನಿಗೆ ಯಾಕೆ ಒಳಪಟ್ಟಿರುತ್ತೇವೆ?
6. ಕ್ರಿಸ್ತನ ಭಯದಲ್ಲಿ ಒಬ್ಬರಿಗೊಬ್ಬರು "ಅಧೀನರಾಗಿರುವುದು" ಎಂಬುದರ ಅರ್ಥ ವೇನು?
7. ಒಬ್ಬನು ಆಹಾರದಿಂದ ತನ್ನ ಸಹೋದರನನ್ನು ಹೇಗೆ ನಾಶಪಡಿಸಬಹುದು?
8. "ಒಬ್ಬರಿಗೊಬ್ಬರು ಸಹೋದರ ಪ್ರೀತಿಯಲ್ಲಿ ನಿರತರಾಗಿರುವುದು" ಎಂಬುದರ ಅರ್ಥವೇನು?
9. ಸಭೆಯು ಕ್ರಿಸ್ತನ ಸೇವಕರಾಗಿರಲು ಯಾಕೆ ಅಪೇಕ್ಷಿಸುತ್ತದೆ?
10. ಯಾವ ಮೂರೂ ವಿಧಗಳಲ್ಲಿ ನಾವು ಕ್ರಿಸ್ತನಿಗೆ ಸಾಲಗಾರರಾಗಿದ್ದೇವೆ?
11. "ಕ್ರಿಸ್ತನು ನಮ್ಮಲ್ಲಿಯ" ಜೀವನದಂತೆ ಕ್ರೈಸ್ತ ಜೀವಿತವನ್ನು ವಿವರಿಸಿರಿ.
12. ಸ್ವಾರ್ಥವನ್ನು ಬಲಿದು ಮಾಡಿಕೊಳ್ಳುವ ಮನಸ್ಸು ಯಾವುದು?
13. ಕ್ರಿಸ್ತನು ನಮಗೆ ಕೊಟ್ಟ ನಿಯೋಗವನ್ನು ಸೇವಕತ್ವವಿಲ್ಲದೇ ಕಾರ್ಯರೂಪಕ್ಕೆ ತರಬಹುದೋ?
14. ಯೇಸುವು ತನ್ನ ಶಿಷ್ಯರ ಪಾದಗಳನ್ನು ತೊಳೆದಾಗ ಯಾವ ಪಾಠವನ್ನು ಬೋಧಿಸಲು ಹುಡುಕಿದನು?

15. “ಶಿಲುಬೆ ಮಡಿಯಲ್ಲಿಯ ನೆಲವು ಸಮನಾಗಿರುತ್ತದೆ” ಎಂಬುದರಿಂದ ಏನು ಅರ್ಥವಾಗುತ್ತದೆ.

© 2009 Truth for Today